**<u>ದಿಃ 06–01–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ–</u>**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ.

ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಿಪಿ–1 ರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 1ಜೆ ಎಂದು ಗುರುತಿಸಲಾಗಿದೆ. ಸಾಕ್ಷಿಯು ನಿಪಿ 1 ರ ಇನ್ನೊಬ್ಬ ಸಾಕ್ಷಿದಾರರಾದ ಎಮ ಜಿ ಕಾವಳೆಕರ ಇವರ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 1ಐ ಎಂದು ಗುರುತಿಸಲಾಗಿದೆ.

ಸಾಕ್ಷಿಯು ಬಾಂಡ ರೈಟರ ಆದ ಎಸ ಎಮ ಕಾಗವಾಡ ಇವರ ಸಹಿಯನ್ನು ನಿಪಿ 1 ರಲ್ಲಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ 1ಕೆ ಎಂದು ಗುರುತಿಸಲಾಗಿದೆ.

ಸಾಕ್ಷಿಯು ನಿಪಿ 1 ನ್ನು ಬರೆದುಕೊಟ್ಟಿರುವ ಜೋತಿಬಾ ಈಶ್ವರ ಪಾಟೀಲ, ಅಶೋಕ ಬಿ ಪಾಟೀಲ, ಅನಂತ ಬಿ ಪಾಟೀಲ, ವಿಜಯ ಬಿ ಪಾಟೀಲ, ಸಂಜಯ ಬಿ ಪಾಟೀಲ, ವಿಶ್ವನಾಥ ಅಲಿಯಾಸ ಈಶ್ವರ ಬಿ ಪಾಟೀಲ, ಇವರ ಸಹಿಗಳನ್ನು ನಿಪಿ 1 ರಲ್ಲಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಕ್ರಮವಾಗಿ ನಿಪಿ 1ಬಿ ಇಂದ 1ಜಿ ಎಂದು ಗುರುತಿಸಲಾಗಿದೆ.

ಸಾಕ್ಷಿಯು ನಿಪಿ 1 ರಲ್ಲಿ ಸುಂಗಧಾ ಇವರ ಹೆಬ್ಬಟ್ಟನ ಗುರುತನ್ನು ಸಹ ಗುರುತಿಸಿರುತ್ತಾರೆ. ಸುಗಂಧಾ ಇವರು ನನ್ನ ಮುಂದೆ ಹೆಬ್ಬಟ್ಟಿನ ಗುರುತು ಹಾಕಿದ್ದರು ಎಂದು ನುಡಿಯುತ್ತಾರೆ. ಅದನ್ನು ಈಗಾಗಲೇ ನಿಪಿ 1 ಎಚ್ ಎಂದು ಗುರುತಿಸಲಾಗಿದೆ. ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ನನ್ನ ಮುಂದೆ ಸಹಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ. ಮಾರಾಟಗಾರರು ಸಹಿ ಮಾಡಿದ ನಂತರ ನಾನು ಮತ್ತು ಮತ್ತೊಬ್ಬ ಸಾಕ್ಷಿಗಾರ ಸಹಿ ಮಾಡಿರುತ್ತೇವೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**C/c. 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**